# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241

**ಇಮೈಲ್**: gchopra@worldbank.org

ವಾಷಿಂಗ್‌ಟನ್‌ನಲ್ಲಿ: ಕರೀನಾ ಮಾನಸೇ (202) 473-1729

ಇ-ಮೈಲ್: kmanasseh@worldbank.org

## ಅಸ್ಸಾಂನಲ್ಲಿ ಕೃಷಿ ಅಭಿವೃದ್ಧಿಗೆ ವಿಶ್ವಬ್ಯಾಂಕ್ ಬೆಂಬಲ ಯೋಜನೆಯಿಂದ ಈಶಾನ್ಯ ಭಾರತೀಯ ರಾಜ್ಯಗಳಿಗೆ ಲಾಭ

**ವಾಷಿಂಗ್ಟನ್, ಡಿಸೆಂಬರ್ 14, 2004 –** ವಿಶ್ವಬ್ಯಾಂಕ್ ಇಂದು ಭಾರತದ ಈಶಾನ್ಯ ಭಾಗದಲ್ಲಿರುವ ಅಸ್ಸಾಂ ರಾಜ್ಯದ ಸರಕಾರಕ್ಕೆ ತನ್ನ ಕೃಷಿ ಕ್ಷೇತ್ರದ ಉತ್ಪಾದಕತೆ ಸುಧಾರಿಸಲು 154 ದಶಲಕ್ಷ ಅಮೇರಿಕನ್ ಡಾಲರ್ ಸಾಲ ಮಂಜೂರು ಮಾಡಿದೆ. ಈ ಸಾಲ ಸಣ್ಣ ಮತ್ತು ಅಂಚಿನ ಹಿಡುವಳಿದಾರರು, ಮೀನುಗಾರಿಕೆಯಲ್ಲಿ ತೊಡಗಿದ ಸಮುದಾಯಗಳು ಮತ್ತು ಭೂರಹಿತರನ್ನುದ್ದೇಶಿಸಿ ಪ್ರಧಾನವಾಗಿ ಬಡವರ ಪರ ಚಟುವಟಿಕೆಗಳ ಮೂಲಕ ಅಸ್ಸಾಂನ ಕೃಷಿ ಅರ್ಥವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ ರೂಪಿಸಲಾಗಿದೆ. ಈ ಯೋಜನೆಯ ವಿವಿಧ ಅಂಶಗಳು ರಾಜ್ಯದ ಎಲ್ಲ ಜಿಲ್ಲೆಗಳ ಗ್ರಾಮೀಣ ಸಮುದಾಯಗಳ ಮೇಲೆ ಪ್ರಭಾವ ಬೀರಲಿದೆ.

ಅಸ್ಸಾಂನಲ್ಲಿ ಶೇಕಡ 85 ಬಡವರು ಗ್ರಾಮೀಣವಾಸಿಗಳಾಗಿದ್ದು ರಾಜ್ಯದ ನಿರುದ್ಯೋಗದ ಪ್ರಮಾಣ ರಾಷ್ಟ್ರದ ಸರಾಸರಿ ಎರಡರಷ್ಟಾಗಿದೆ. ಕೃಷಿಯ ಪ್ರಮುಖ ಅಂಶವೆಂದರೆ ಬ್ರಹ್ಮಪುತ್ರ ಮತ್ತು ಬರಾಕ್ ಕಣಿವೆಗಳಲ್ಲಿನ ಮಳೆ–ಆಧಾರಿತ ಭತ್ತ ಉತ್ಪಾದನಾ ವ್ಯವಸ್ಥೆ. ಇದು ಒಟ್ಟು ಕೃಷಿಯ ಅಡಿಯಲ್ಲಿರುವ ಭೂಮಿಯ ಶೇಕಡ 70 ಆಗಿದೆ. ಇತ್ತೀಚಿನ ವರ್ಷಗಳಲ್ಲಿ ಹಲವು ಮೂಲಭೂತ ಸಮಸ್ಯೆಗಳಿಂದಾಗಿ ರಾಜ್ಯದ ಕೃಷಿ ಬೆಳವಣಿಗೆ ನಿಂತು ಹೋಗಿದೆ. ಈ ಸಮಸ್ಯೆಗಳಲ್ಲಿ, ನೀರಾವರಿ ಮತ್ತು ರೈತರ ಬಳಿ ಕೃಷಿ ಬೇಸಾಯ ಯಂತ್ರೀಕರಣಕ್ಕೆ ಅವಶ್ಯಕವಾದ ಬಂಡವಾಳದ ಕೊರತೆ; ಸಾಕಷ್ಟಿಲ್ಲದ ವಿಸ್ತರಣಾ ಸೌಲಭ್ಯಗಳು ಮತ್ತು ಫಲಪ್ರದವಾದ ಮಾರುಕಟ್ಟೆ ಸಂಪರ್ಕ ವ್ಯವಸ್ಥೆ; ಜಾನುವಾರುಗಳ ಕ್ಷೀಣಿಸಿದ ಉತ್ಪಾದಕತೆ; ಮತ್ತು ಸಂಪರ್ಕ ಹಾಗೂ ಸರಕು ಮತ್ತು ವ್ಯಾಪಾರಗಳ ಸುಗಮ ಚಾಲನೆಯನ್ನು ತಡೆಗಟ್ಟುವ ಅಭಿವೃದ್ಧಿ ಹೊಂದಿರದ ಗ್ರಾಮೀಣ ರಸ್ತೆಗಳು ಸೇರಿವೆ.

"ಅಸ್ಸಾಂನ ಕೃಷಿಕ ಪ್ರತಿಸ್ಪರ್ಧಾತ್ಮಕತೆಯ ಯೋಜನೆ ರೈತರ ಮತ್ತು ಸಮುದಾಯ ಕೂಟಗಳ ಉತ್ಪಾದನಾ ಕ್ಷಮತೆಯನ್ನು ಸುಧಾರಿಸಿ ಮಾರುಕಟ್ಟೆ ಅವಕಾಶಗಳಿಗೆ ಪ್ರವೇಶ ಸಾಧ್ಯತೆ ಹೆಚ್ಚಿಸುತ್ತದೆ." ಎನ್ನುತ್ತಾರೆ ವಿಶ್ವಬ್ಯಾಂಕ್‌ನ ಹಿರಿಯ ಕೃಷಿ ತಜ್ಞರಾದ ರಾಬರ್ಟ್ ಎಪ್ವರ್ಥ್. "ನಿರ್ದಿಷ್ಟ ಚಟುವಟಿಕೆಗಳ ಯೋಜನೆ ಮೂಲಕ ರೈತರು ಮತ್ತು ಭೂರಹಿತ ವಿಭಾಗಗಳು ಬೆಳೆ, ಮೀನು ಮತ್ತು ಜಾನುವಾರು ಉತ್ಪನ್ನಗಳ ಹೆಚ್ಚಳದಿಂದ ಲಾಭ ಪಡೆಯುತ್ತಾರಲ್ಲದೆ ಸೂಕ್ತವಾದ ದರದಲ್ಲಿ ಮಾರಾಟ ಮಾಡಬಲ್ಲ ಉತ್ಪಾದನೆಯ ಪ್ರಮಾಣದಲ್ಲಿಯೂ ಹೆಚ್ಚಳ ಸಾಧ್ಯವಾಗುತ್ತದೆ."

ಯೋಜನೆಯ ಚಟುವಟಿಕೆಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗುವುದು :

**(i)** ಹಣಹೂಡಿಕೆ ಗ್ಯಾರಂಟಿ ಯೋಜನೆ : ಸಣ್ಣರೈತರು ನೀರಾವರಿ, ಕೃಷಿ ಭೂಮಿಯ ಯಂತ್ರೀಕರಣ ಮತ್ತು ಮೀನು ಕೊಳಗಳಿಗಾಗಿ ಆದಾಯ ಜನಕ ರೀತಿಯಲ್ಲಿ ಕೃಷಿ ನೆಲದಲ್ಲಿ ಹಣಹೂಡುವುದನ್ನು ಪ್ರೋತ್ಸಾಹಿಸುವುದು; ಮತ್ತ ಸೂಕ್ಷ್ಮ ಚರಂಡಿ ಕಾರ್ಯ ಯೋಜನೆಗಳು ಮತ್ತು ತೆರೆದ ನೀರಿನ ಮೀನುಗಾರಿಕೆ ಕಾರ್ಯಗಳಿಗೆ ಸಾಮುದಾಯಿಕ ಹಣಹೂಡಿಕೆ;

**(ii)** ಕೃಷಿ ಸೌಲಭ್ಯಗಳು ಮತ್ತು ಮಾರುಕಟ್ಟೆ ಸರಣಿ ಅಭಿವೃದ್ಧಿ : ಉಪಯುಕ್ತವಾದ ಖಾಸಗೀ ಕ್ಷೇತ್ರದ ಪಾಲುದಾರಿಕೆಯಿಂದ ವಿಕೇಂದ್ರೀಕೃತ ಸಂಶೋಧನೆ ಮತ್ತು ವಿಸ್ತರಣಾ ವ್ಯವಸ್ಥೆಗಳನ್ನು ಪ್ರೋತ್ಸಾಹಿಸುವುದು; ಜಾನುವಾರು ಮತ್ತು ಮೀನುಗಳ ಉತ್ಪಾದನಾ ಕ್ಷಮತೆಯ ಗುಣಮಟ್ಟ

ಸುಧಾರಿಸುವುದು; ರೈತರ ಮಾರುಕಟ್ಟೆ ಜ್ಞಾನವನ್ನು ಬಲಪಡಿಸುವುದು ಮತ್ತು ಬಲವಾದ ಮಾರುಕಟ್ಟೆ ಸಂಪರ್ಕಗಳುಳ್ಳ ಉತ್ಪಾದನಾ ಸಂಸ್ಥೆಗಳ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು;

**(iii)** ಮೂಲಸೌಲಭ್ಯವು ಅಭಿವೃದ್ಧಿ : ಸುಮಾರು 2000 ಕಿ.ಮೀ. ಉದ್ದದ ಗ್ರಾಮೀಣ ರಸ್ತೆ ವ್ಯವಸ್ಥೆಯ ಗುಣಮಟ್ಟ ಸುಧಾರಿಸುವುದು ಮತ್ತು /ಅಥವಾ ಪುನಃಸ್ಥಾಪಿಸುವುದು ಮತ್ತು 70 ಕ್ಕೂ ಹೆಚ್ಚು ಸಗಟು ಮತ್ತು ಚಿಲ್ಲರೆ ಮಾರಟವನ್ನು ವಿಸ್ತರಿಸುವುದು.

ಈ ಯೋಜನೆ 1995ರಲ್ಲಿ ಸ್ಥಾಪಿಸಿ ವಿಶ್ವಬ್ಯಾಂಕ್ ಹಣ ನೀಡಿ ಇತ್ತೀಚೆಗೆ ಕೊನೆಗೊಂಡ ಅಸ್ಸಾಂ ಗ್ರಾಮೀಣ ಆಧಾಋುರಚನೆ ಮತ್ತು ಕೃಷಿ ಸೌಲಭ್ಯಗಳ ಯೋಜನೆಯ ಮುಂದುವರಿಕೆಯಾಗಿದೆ.

ವಿಶ್ವಬ್ಯಾಂಕ್‌ನ ಭಾರತದ ರಾಷ್ಟ್ರ ನಿರ್ದೇಶಕ ಮೈಕಲ್ ಕಾರ್ಟರ್ ಹೇಳುತ್ತಾರೆ : “ಈ ಯೋಜನೆ ಕೃಷಿ ಉತ್ಪಾದನೆ ಮತ್ತು ಕಟುಂಬದ ವರಮಾನಗಳನ್ನು ಹೆಚ್ಚಿಸುವ ಮೂಲಕ ಬಡತನವನ್ನು ಕಡಿಮೆಗೊಳಿಸುವ ಭಾರತದ ಅಭಿವೃದ್ಧಿ ಉದ್ದೇಶಕ್ಕೆ ನೆರವು ನೀಡುತ್ತದೆ. ಇದಲ್ಲದೆ ಈ ಯೋಜನೆ ಸಾಮಾನ್ಯ ಸಂಪನ್ಮೂಲಗಳತ್ತ ಸಮುದಾಯಗಳನ್ನು ಪ್ರವೇಶನ, ಆಧಾಋು ರಚಿನಯ ಗುಣಮಟ್ಟ ಹೆಚ್ಚಿಸುವುದು, ಮತ್ತು ಮಾರುಕಟ್ಟೆ ಹಾಗೂ ಸಮಾಜ ಉದ್ಧಾರ ಸೇವೆಗಳತ್ತ ಶಾರೀರಿಕ ಪ್ರವೇಶನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಹಾಯಕವಾಗುವುದು.”

ಈ ಪ್ರಸ್ತಾಪಿಸಿದ ಯೋಜನೆ ಸರಕಾರದ ಕಾರ್ಯಕ್ಷಮತೆಯನ್ನು ಸುಧಾರಿಸುವುದು, ವಿಕೇಂದ್ರೀಕೃತ ಸೌಲಭ್ಯಗಳನ್ನು ಬೆಳೆಸುವುದು, ಸಮುದಾಯ–ಚಾಲಿತ ಅಭಿವೃದ್ಧಿ ವಿಚಾರಗಳಿಗೆ ಬೆಂಬಲ ನೀಡುವುದು, ಮತ್ತು ರಸ್ತೆ ನಿರ್ವಹಣೆಗಾಗಿ ಹೆಚ್ಚಿನ ಖರ್ಚು ಸಂಬಂಧಿಸಿದ ವಿಷಯಗಳಿಗೆ ಒತ್ತು ನೀಡುವ ವಿಶ್ವಬ್ಯಾಂಕ್‌ನ 2004 ರಾಷ್ಟ್ರ ಸಹಾಯ ನೀತಿಗೆ ಸಹಾಯ ನೀಡುತ್ತದೆ. ಅಲ್ಲದೆ ಸಮುದಾಯಗಳ ಅಧಿಕಾರ ಮತ್ತು ಹಣಹೂಡಿಕೆ ಹಾಗೂ ಖಾಸಗೀ ಕ್ಷೇತ್ರ ನೇತೃತ್ವದ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಉದ್ದೇಶಕ್ಕೆ ಸಹಾಯ ನೀಡುತ್ತದೆ. ವಿಶ್ವಬ್ಯಾಂಕ್‌ನ ಅನುದಾನ ಸಂಸ್ಥೆಯಾದ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ(ಐ.ಡಿ.ಎ)ಯಿಂದ ನೀಡಲಾದ ಈ ಸಾಲದಲ್ಲಿ 0.75% ಸೇವಾಶುಲ್ಕ, ಹತ್ತುವರ್ಷದ ರಿಯಾಯಿತಿ ಅವಧಿ ಮತ್ತು ಮೂವತ್ತೈದು ವರ್ಷ ವಾಯಿದೆ ಅವಧಿ ಸೇರಿದೆ.

ಭಾರತದಲ್ಲಿ ವಿಶ್ವಬ್ಯಾಂಕಿನ ಚಟುವಟಿಕೆಗಳ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವೆಬ್‌ಸೈಟ್‌ಅನ್ನು ನೋಡಿ:

http://www.worldbank.org/in